**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ ಸಿ. 2748/2021**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ದಿನಾಂಕಃ 11-07-2024** **ಪಿ.ಡಬ್ಲ್ಯೂ 1**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎನ್ ಕೆ ವಕೀಲರಿಂದಃ**

ನಾನು 6 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಬೀಡಿ ಕಟ್ಟುವ ಕೆಲಸ ಮಾಡುತ್ತೇನೆ. ನನಗೆ ಉರ್ದು ಓದಲು ಬರೆಯಲು ಬರುತ್ತದೆ. ಕನ್ನಡ ಅಷ್ಟು ಚೆನ್ನಾಗಿ ಬರುವುದಿಲ್ಲ. ನನ್ನ ಫಿರ್ಯಾದಿ ಅರ್ಜಿಯಲ್ಲಿರುವ ಅಂಶಗಳು ನನ್ನ ವಕೀಲರು ನನಗೆ ಹೇಳಿದ್ದಾರೆ. ನಾನು 30 ನಂಬರ್ ನ ಬೀಡಿ ಕಟ್ಟುತ್ತೇನೆ. ನಮಗೆ ಬೀಡಿ ಕಟ್ಟುವ ಕಂಪನಿಯಿಂದ ಸದಸ್ಯತ್ವ ನೀಡಿರುತ್ತಾರೆ ಎಂದರೆ ಸರಿ. ಈ ರೀತಿ ನಾನು ಸದಸ್ಯಳಾಗಿರುವ ಬಗ್ಗೆ ದಾಖಲೆಯನ್ನು ಸಲ್ಲಿಸಲು ತೊಂದರೆ ಇಲ್ಲ ಎಂದರೆ ಸರಿ. ಬೀಡಿ ಕಟ್ಟುವುದರಿಂದ ತಿಂಗಳಿಗೆ 8-9 ಸಾವಿರ ರೂ ಆದಾಯ ಇದೆ. ಬೀಡಿ ಕಟ್ಟುವುದನ್ನು ಹೊರತು ಪಡಿಸಿ ನಾನು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನನಗೆ 4 ಜನ ಮಕ್ಕಳು. ಅವರೆಂದರೆ ಹಸ್ಮಿ ಬಜಿದ್ದೀನ್, ಮಲಿಕ್ ರಿಹಾನ್ ಮತ್ತು ಹೆಣ್ಣುಮಗಳು ತಯಬಾನ್ ಹಸ್ಮಿ . ನನ್ನ ಮೊದಲನೇ ಮಗ ಮತ್ತು 3 ನೇ ಮಗ ಹಸ್ಮಿ ಫುಟ್ ಪಾತ್ ನಲ್ಲಿ ಬಟ್ಟೆ ವ್ಯಾಪಾರ ಮಾಡುತ್ತಾರೆ. 2 ನೇ ಮಗ ಬಜಿದ್ದಿನ್ ದಾವಣಗೆರೆಯ ಒಂದು ಕಾಫಿ ಅಂಗಡಿಯಲ್ಲಿ ಕೆಲಸ ಮಾಡುತ್ತಾನೆ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ ಎಂದು ನನ್ನ ಫಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ. ಆರೋಪಿ ನನಗೆ ಸುಮಾರು 15-16 ವರ್ಷಗಳಿಂದ ಪರಿಚಯ. ಆರೋಪಿಯ ಗಂಡ ಬಾರ್ ಬೆಡ್ಡಿಂಗ್ ಕೆಲಸ ಮಾಡುತ್ತಾರೆ. ಆರೋಪಿ ಕುಟುಂಬದ ಆದಾಯ ಚೆನ್ನಾಗಿ ಇದೆ ಎಂದರೆ ಸರಿ. ಆರೋಪಿ ಈ ಮೊದಲು ಪ್ರಶಾಂತ ನಗರದಲ್ಲಿ ಇದ್ದರು ನಂತರ ಇಮಾಮ್ ಮಹಲ್ ನಲ್ಲಿ ಇದ್ದು ಈಗ ಲಡ್ವಾ ಓಣಿಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 2021 ರಲ್ಲಿ ಇಮಾಮ್ ಮೊಹಲ್ಲಾವನ್ನು ಬಿಟ್ಟು ಹೋಗಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ನಾನು ಕೇಳಿ ತಿಳಿದುಕೊಂಡಿದ್ದೇನೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಕನ್ನಡದಲ್ಲಿ ಇದೆ ಸಾಕ್ಷಿಯು ಮುಂದುವರೆದು ನಾನು ಉರ್ದುನಲ್ಲಿ ಹೇಳಿರುತ್ತೇನೆ ವಕೀಲರು ಕನ್ನಡದಲ್ಲಿ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯ ಅತ್ತೆ ನನಗೆ ಸುಮಾರು 15-16 ವರ್ಷಗಳಿಂದ ಪರಿಚಯ. ಆರೋಪಿಯ ಅತ್ತೆಗೆ 5 ಜನ ಗಂಡುಮಕ್ಕಳು. ಒಬ್ಬರು ಹೆಣ್ಣುಮಗಳು. ಆರೋಪಿಯ ಅತ್ತೆಯ ಮೊದಲನೇ ಮಗ ಹೆಸರು ರಫೀಕ್, 2 ನೇ ಮಗ ಬಾಬು, 3 ನೇ ಮಗ ಇಕ್ತಿಯಾರ್ ರೆಹಮತ್, 4 ನೇ ಮಗ ಮೆಹಬೂಬ್ ಬಾಷಾ ಮತ್ತು 5 ನೇ ಮಗ ಸಾದಿಕ್ ಮತ್ತು 6 ನೇ ಮಗ ಸಮೀವುಲ್ಲಾ ಎಂದರೆ ಸರಿ. ಸದರಿಯವರು ಎಲ್ಲರೂ ಕೆಲಸ ಮಾಡುವುದರಿಂದ ಅವರು ಚೆನ್ನಾಗಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ಅತ್ತೆ ಮತ್ತು ನನ್ನ ನಡುವೆ ಒಳ್ಳೆಯ ಸ್ನೇಹ ಮತ್ತು ಸಹಕಾರ ಇತ್ತು ಎಂದು ಹೇಳಿದ್ದು ಅದೆಂದರೆ ನನ್ನ ಮತ್ತು ಅವರ ನಡುವೆ ಆಗಾಗ ಹಣಕಾಸಿನ ವ್ಯವಹಾರ ಇತ್ತು ಎಂದು ನುಡಿಯುತ್ತಾರೆ. ನನ್ನ ಮತ್ತು ಅವರ ನಡುವೆ ಯಾವ

ಯಾವಾಗ ಎಷ್ಟು ಹಣದ ವ್ಯವಹಾರ ಆಗಿತ್ತು ಎಂದು ಈಗ ನನಗೆ ನೆನಪಿಲ್ಲ. ಸಾಮಾನ್ಯವಾಗಿ ಹಣಕಾಸಿನ ವ್ಯವಹಾರಕ್ಕೆ ಲಿಖಿತ ಬರವಣಿಗೆ ಮಾಡಿ ಕೊಡುತ್ತಾರೆ ಎಂದರೆ ಸರಿ. ಈ ರೀತಿ ನಮ್ಮ ನಡುವಿನ ಹಣಕಾಸಿನ ವ್ಯವಹಾರಕ್ಕೆ ಯಾವುದೇ ಲಿಖಿತ ಬರವಣಿಗೆ ಆಗಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿ, ಆರೋಪಿಯ ಗಂಡ ಮತ್ತು ಆರೋಪಿ ಅತ್ತೆ ಪ್ರಾಮಿಸರಿ ಬರೆದುಕೊಟ್ಟಿರುತ್ತಾರೆ. ಪ್ರಾಮಿಸರಿ ನೋಟನ್ನು 2021 ರಲ್ಲಿ ಬರೆದುಕೊಟ್ಟಿರುತ್ತಾರೆ. ನಿಖರವಾದ ದಿನಾಂಕ ತಿಂಗಳು ನೆನಪಿಲ್ಲ. ಸದರಿ ಪ್ರಾಮಿಸರಿ ನೋಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ತೊದರೆ ಇಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿರುತ್ತೇವೆ ಎಂದು ನುಡಿಯುತ್ತಾರೆ. ನ್ಯಾಯಲಯದಲ್ಲಿ ಸಲ್ಲಿಸಿರುವ ದಾಖಲೆಗಳ ಬಗ್ಗೆ ಮಾಹಿತಿ ಇದೆ. ನಿಪಿ.6 ರಲ್ಲಿರುವ ಸಂಗತಿಗಳನ್ನು ಆರೋಪಿ, ಆರೋಪಿಯ ಗಂಡ ಮತ್ತು ಆರೋಪಿ ಅತ್ತೆ ಬರೆದುಕೊಂಡು ಬಂದಿದ್ದರು. ರೇಷ್ಮಾ ಪರ್ವಿನ್ ನನ್ನ ಸೊಸೆ. ನಿಪಿ.6 ನ್ನು ರೇಷ್ಮಾ ಪರ್ವಿನ್ ರವರು ಬೆರದಿರುತ್ತಾರೆ ಎಂದರೆ ಸರಿಯಲ್ಲ. ಮುನ್ನಾ ನಮ್ಮ ಪಕ್ಕದ ಮನೆಯ ವಾಸಿ. ಮುನ್ನಾ ನನ್ನ ಸಹೋದರ ಅಲ್ಲ. ನಿಪಿ.6 ರಲ್ಲಿ ಸ್ಟಾಂಪ್ ಮೇಲೆ ಸಹಿ ಇಲ್ಲ ಎಂದರೆ ಸರಿ. ಸದರಿ ನಿಪಿ.6 ಪ್ರಾಂಸರಿ ನೋಟ್ ನ್ನು ನಾನು ನನ್ನ ಸೊಸೆ ಹಾಗೂ ನನ್ನ ಸಹೋದರ ಸೇರಿಕೊಂಡು ಪ್ರರಕಣಕ್ಕೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ನನ್ನ ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ 2021 ರಲ್ಲಿ 2-3 ತಿಂಗಳು ಬಿಟ್ಟು ಆರೋಪಿ, ಆರೋಪಿ ಗಂಡ ಮತ್ತು ಅತ್ತೆ ಬಂದು ಒಂದು ಬಾರಿ 1 ಲಕ್ಷ, ನಂತರ 60 ಸಾವಿರ ಮತ್ತು 70,000 ರೂ ಹಣವನ್ನು ನನ್ನ ಸ್ನೇಹಿತೆಯಿಂದ ಕೊಡಿಸಿರುತ್ತೇನೆ. ಸದರಿ ಹಣವನ್ನು ನೀಡಿದ ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಸದರಿ ಹಣವನ್ನು ನಗದು ರೂಪದಲ್ಲಿ ನಮ್ಮ ಮನೆಯಲ್ಲಿ ನೀಡಿರುತ್ತೇನೆ. 1 ಲಕ್ಷ ರೂ ಹಣವನ್ನು ನೀಡುವಾಗ ಧರ್ಮಸ್ಥಳ ಸಂಘದಿಂದ ತೆಗೆದು ನೀಡಿರುತ್ತೇನೆ. ಸದರಿ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ನನ್ನ ಪಿರ್ಯಾದಿಯಲ್ಲಿ ಆರೋಪಿಗೆ ಹಣ ನೀಡಿದ ನಿಖರವಾದ ದಿನಾಂಕವನ್ನು ಹೇಳಿ ಬರೆಸಿಲ್ಲ. ಆರೋಪಿ ತನ್ನ ಗಂಡನ ತಂದೆಯ ಹೃದಯ ಶಸ್ತ್ರಚಿಕಿತ್ಸೆಗಾಗಿ ನನ್ನಿಂದ ಹಣ ಪಡೆದಿರುತ್ತಾರೆ. ಈ ವಿಷಯವನ್ನು ನನ್ನ ಪಿರ್ಯಾದಿಯಲ್ಲಿ ಹೇಳಿ ಬರೆಸಿದ್ದೇನೆ. ಆರೋಪಿ, ಆರೋಪಿ ಗಂಡ ಮತ್ತು ಅತ್ತೆ ರವರು 2021 ರಲ್ಲಿ 1 ಲಕ್ಷ ಹಣವನ್ನು ನನ್ನ ಬಳಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಮಾವನ ಹೆಸರು ನನಗೆ ಗೊತ್ತಿಲ್ಲ. ಸದರಿಯವರು 2021 ರಲ್ಲಿ ದಾವಣಗೆರೆಯ ಹೈಟೆಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಆ ಸಂದರ್ಭದಲ್ಲಿ 1 ಲಕ್ಷ ಹಣ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಮಾವ ನೂರ್ ರೆಹಮತ್ ದಿಃ 06.09. 2018 ರಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ನಾನು 1 ಲಕ್ಷ ರೂ ಹಣವನ್ನು ಕೊಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ 1 ಲಕ್ಷ ರೂ ಹಣವನ್ನು ಕೊಟ್ಟಿದ್ದೇನೆ ಎಂದು ನನ್ನ ಪಿರ್ಯಾದಿಯಲ್ಲಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ.

ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ